| Roll No. | | | | | | | | | | | | Serial No. of Q. C. A. B. |
|---|---|---|---|---|---|---|---|---|---|---|---|---|

ಒಟ್ಟು ಪ್ರಶ್ನೆಗಳ ಸಂಖ್ಯೆ : 50 + 28 = 78 ]
[ ಒಟ್ಟು ಮುದ್ರಿತ ಪುಟಗಳ ಸಂಖ್ಯೆ : 16

Total No. of Questions : 50 + 28 = 78 ]
[ Total No. of Printed Pages : 16

**ಸಂಕೇತ ಸಂಖ್ಯೆ : 01-K**
**ವಿಷಯ : ಪ್ರಥಮ ಭಾಷೆ — ಕನ್ನಡ**

**Code No. : 01-K**
**Subject : First Language — KANNADA**

ದಿನಾಂಕ : 30. 03. 2009 ]
[ Date : 30. 03. 2009

ಸಮಯ : ಬೆಳಿಗ್ಗೆ 10-30 ರಿಂದ ಮಧ್ಯಾಹ್ನ 1-30 ರವರೆಗೆ ]
[ Time : 10-30 A.M. to 1-30 P.M.

ಪರಮಾವಧಿ ಅಂಕಗಳು : 125 ]
[ Max. Marks : 125

## FOR OFFICE USE ONLY

### PART – A

| Q. No. | Marks | Q. No. | Marks | Q. No. | Marks | Q. No. | Marks | Q. No. | Marks | Q. No. | Marks |
|---|---|---|---|---|---|---|---|---|---|---|---|
| 1. | | 10. | | 19. | | 28. | | 37. | | 46. | |
| 2. | | 11. | | 20. | | 29. | | 38. | | 47. | |
| 3. | | 12. | | 21. | | 30. | | 39. | | 48. | |
| 4. | | 13. | | 22. | | 31. | | 40. | | 49. | |
| 5. | | 14. | | 23. | | 32. | | 41. | | 50. | |
| 6. | | 15. | | 24. | | 33. | | 42. | | × | |
| 7. | | 16. | | 25. | | 34. | | 43. | | × | |
| 8. | | 17. | | 26. | | 35. | | 44. | | × | |
| 9. | | 18. | | 27. | | 36. | | 45. | | × | |
| *Total Marks of Part – A* | | | | | | | | | | | |

### PART – B

| Q. No. | Marks | Q. No. | Marks | Q. No. | Marks | Q. No. | Marks | Q. No. | Marks | Q. No. | Marks |
|---|---|---|---|---|---|---|---|---|---|---|---|
| 51. | | 56. | | 61. | | 66. | | 71. | | 76. | |
| 52. | | 57. | | 62. | | 67. | | 72. | | 77. | |
| 53. | | 58. | | 63. | | 68. | | 73. | | 78. | |
| 54. | | 59. | | 64. | | 69. | | 74. | | × | |
| 55. | | 60. | | 65. | | 70. | | 75. | | × | |
| *Total Marks of Part – B* | | | | | | | | | | | |

| **Total Marks in words** | | **Grand Total** | |
|---|---|---|---|

| | | | |
|---|---|---|---|
| 1. ✓ | | ✓ | ✓ |
| 2. ✓ | | | |
| *Signature of Evaluators* | *Registration No.* | *Signature of the Deputy Chief* | *Signature of the Room Invigilator* |

www.StudyGuideIndia.com

*ಸಾಮಾನ್ಯ ಸೂಚನೆಗಳು :*

i) ಈ ಪ್ರಶ್ನೆ ಸಹಿತ ಉತ್ತರ ಪುಸ್ತಕವು **ಎರಡು** ವಿಭಾಗಗಳನ್ನು ಹೊಂದಿದೆ. ಅವು ಎ – **ವಿಭಾಗ** ಮತ್ತು ಬಿ – **ವಿಭಾಗ.**

ii) ಎ – **ವಿಭಾಗ** 50 ಪ್ರಶ್ನೆಗಳನ್ನು ಹೊಂದಿದೆ ಮತ್ತು ಬಿ – **ವಿಭಾಗ** 28 ಪ್ರಶ್ನೆಗಳನ್ನು ಹೊಂದಿದೆ.

iii) ಈ ಪ್ರಶ್ನೆ ಸಹಿತ ಉತ್ತರ ಪುಸ್ತಕದಲ್ಲೇ ಉತ್ತರಿಸಲು ಸ್ಥಳಾವಕಾಶ ಮಾಡಲಾಗಿದೆ.

iv) ಎ – **ವಿಭಾಗದಲ್ಲಿರುವ** ಸೂಚನೆಗಳನ್ನು ಅನುಸರಿಸಿ ಮತ್ತು ಪ್ರಶ್ನೆ ಸಹಿತ ಉತ್ತರ ಪುಸ್ತಕದಲ್ಲಿರುವ ನಾಲ್ಕು ಪರ್ಯಾಯ ಉತ್ತರಗಳಲ್ಲಿ ಸರಿಯಾದ ಉತ್ತರವನ್ನು ಆರಿಸಿ ಕೊಟ್ಟಿರುವ ಜಾಗದಲ್ಲಿಯೇ ಬರೆಯಿರಿ.

v) ಬಿ – **ವಿಭಾಗದ** ಪ್ರತಿ ಪ್ರಶ್ನೆಯ ಉತ್ತರಗಳಿಗೆ ಸಾಕಷ್ಟು ಜಾಗವನ್ನು ಕೊಡಲಾಗಿದೆ. ಉತ್ತರಗಳನ್ನು ಆಯಾ ಜಾಗಗಳಲ್ಲಿಯೇ ಬರೆಯಿರಿ.

## ಎ – ವಿಭಾಗ

ಈ ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಪರ್ಯಾಯ ಉತ್ತರಗಳನ್ನು ಸೂಚಿಸಲಾಗಿದೆ. ಅವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ, ಉತ್ತರಕ್ಕೆ ಕೊಟ್ಟಿರುವ ಜಾಗದಲ್ಲಿಯೇ ಬರೆಯಿರಿ : $50 \times 1 = 50$

1. ಸರ್ವ ಸಂಪನ್ನತೆಯಿಂದ ಕೂಡಿದ ಗ್ರಾಂಥಿಕ ಭಾಷೆ

(ಎ) ಕನ್ನಡ (ಬಿ) ಸಂಸ್ಕೃತ

(ಸಿ) ತಮಿಳು (ಡಿ) ತೆಲುಗು

*ಉತ್ತರ :* __________

2. ಜನರು ಅಭಿಮಾನಧನರೂ, ಬುದ್ಧಿಶಾಲಿಗಳೂ, ಪ್ರಯೋಗಶೀಲರೂ ಆಗಿದ್ದರೆ

(ಎ) ಭಾಷೆ ಶ್ರೀಮಂತವಾಗುವುದು (ಬಿ) ಭಾಷೆ ಸತ್ವಪೂರ್ಣವಾಗುವುದು

(ಸಿ) ಭಾಷಾಭಿವೃದ್ಧಿಯಾಗುವುದು (ಡಿ) ಭಾಷಾ ಆಂದೋಲನವಾಗುವುದು

*ಉತ್ತರ :* __________

3. ಮಸೆದ ಚೂರಿಯಂತಿದ್ದು, ನಮ್ಮನ್ನೆಲ್ಲ ಕೊಲ್ಲುವ ನಗೆಯೇ

(ಎ) ಚುಚ್ಚುನಗೆ (ಬಿ) ಮುಗ್ಧನಗೆ

(ಸಿ) ರಸನಗೆ (ಡಿ) ಒರಟುನಗೆ

*ಉತ್ತರ :* __________

4. ಅಂಗುಲಿಮಾಲನಿಗೆ ಬುದ್ಧನು ಮಂತ್ರವಿದ್ಯೆಯನ್ನರಿತ ಮಾಟಗಾರನೋ ಎಂದು ಅನಿಸಿದ್ದು

(ಎ) ಖಡ್ಗವು ಕೊಲೆ ಗಳಿಗೆಯಲ್ಲಿ ಕೈಜಾರಿ ಬಿದ್ದುದರಿಂದ

(ಬಿ) ಹೊಚ್ಚ ಹೊಸ ಅನುಭವವಾಗಿದ್ದರಿಂದ

(ಸಿ) ಬುದ್ಧನ ಕಣ್ಣುಗಳಲ್ಲಿ ಕಡಲು ಉರುಳಿದರಿಂದ

(ಡಿ) ಬುದ್ಧನ ಕಣ್ಣುಗಳಲ್ಲಿ ಯಾವುದೋ ಲೋಕ ಕಂಡಿದ್ದರಿಂದ

*ಉತ್ತರ :* __________

5. ಬುದ್ಧನು ತನ್ನನ್ನು ಏನೆಂದು ಕರೆದುಕೊಂಡಿದ್ದಾನೆ ?

(ಎ) ಮಂತ್ರವಿದ್ಯೆಯ ಸಾಧಕ (ಬಿ) ಒಲುಮೆಯ ಸಾಧಕ

(ಸಿ) ತಂತ್ರವಿದ್ಯೆಯ ಸಾಧಕ (ಡಿ) ಆಧ್ಯಾತ್ಮ ವಿದ್ಯೆಯ ಸಾಧಕ

*ಉತ್ತರ :* __________



www.StudyGuideIndia.com

6. ಸಿದ್ದಪ್ಪನು ಎಷ್ಟು ವರ್ಷಗಳಿಂದ ಮಳೆಯಿಲ್ಲವೆಂದು ಕೊರಗಿದ್ದ ?

(ಎ) ಎರಡು ವರ್ಷ (ಬಿ) ನಾಲ್ಕು ವರ್ಷ

(ಸಿ) ಐದು ವರ್ಷ (ಡಿ) ಮೂರು ವರ್ಷ

*ಉತ್ತರ :* ______________________

7. ಸಸ್ಯವರ್ಗದಲ್ಲಿ ಕಂಡುಬರುವ ಪ್ರಕೃತಿ ಧರ್ಮ

(ಎ) ಹಣ್ಣೆಲೆಗೆ ದಾರಿ ಮಾಡಿಕೊಟ್ಟು ಚಿಗುರೆಲೆ ಉದುರುವುದು

(ಬಿ) ಹಣ್ಣೆಲೆ ಚಿಗುರುವುದು

(ಸಿ) ಚಿಗುರೆಲೆಗೆ ದಾರಿ ಮಾಡಿಕೊಟ್ಟು ಹಣ್ಣೆಲೆ ಉದುರುವುದು

(ಡಿ) ಚಿಗುರೆಲೆ ಚಿಗುರುವುದು

*ಉತ್ತರ :* ______________________

8. ಮೇಷ್ಟ್ರಿಗೆ ಹೆಚ್ಚು ಸಂಕಟವಾಗಿದ್ದು

(ಎ) ಜುಲ್ಮಾನೆಯಿಂದ ಮಾನ ಹೋದುದಕ್ಕೆ

(ಬಿ) ಮಕ್ಕಳನ್ನು ಹೊರಹಾಕಿದ್ದಕ್ಕೆ

(ಸಿ) ಹೆಂಡತಿ ಸತ್ತಿದ್ದಕ್ಕೆ

(ಡಿ) ಪರಂಗಿ ಟೋಪಿ ಸಾಹೇಬರು ಬುಡಬುಡನೆ ಹೊರಟುಹೋಗಿದ್ದಕ್ಕೆ

*ಉತ್ತರ :* ______________________

9. ಕಡಿದಾಳ್ ಮಂಜಪ್ಪನವರು ಯಾರ ಕಣ್ಣಿಗೆ ಬಹಳ ಸಂಭಾವಿತರಂತೆ ಕಂಡುಬಂದರು ?

(ಎ) ಶೇಷಾದ್ರಿ (ಬಿ) ಕಾಂಗ್ರೆಸ್ ಕಾರ್ಯಕರ್ತ

(ಸಿ) ಗುಮಾಸ್ತ (ಡಿ) ಸೋಮಪ್ಪ

*ಉತ್ತರ :* ______________________

10. ಕಡಿದಾಳ್ ಮಂಜಪ್ಪನವರ ಆತ್ಮಕಥನ

(ಎ) ಕನಸಾಗದ ನನಸು (ಬಿ) ನಾಳೆಯ ನೆಳಲು

(ಸಿ) ನನಸಾಗದ ಕನಸು (ಡಿ) ಕ್ರಾಂತಿಕೂಟ

*ಉತ್ತರ :* ______________________

11. ಯಾವ ಶಿಸ್ತಿಗೂ ಒಳಪಡದ ದುರ್ಬಲ ಮನಸ್ಸಿನ ಸ್ಥಿತಿ

(ಎ) ಅಪ್ರಾಮಾಣಿಕತೆ (ಬಿ) ನಿದ್ರಾಹೀನತೆ

(ಸಿ) ಚಂಚಲತೆ (ಡಿ) ನಿಷ್ಠುರತೆ

*ಉತ್ತರ :* ______________________

12. ಸ್ವಾಮಿ ಜಗದಾತ್ಮಾನಂದರು ಓರ್ವ

(ಎ) ದಲಿತ ಕವಿ (ಬಿ) ಆಧ್ಯಾತ್ಮ ಸಾಹಿತಿ

(ಸಿ) ನವ್ಯ ಸಾಹಿತಿ (ಡಿ) ವಚನಕಾರ

*ಉತ್ತರ :* ______________________

www.StudyGuideIndia.com

13. ಭಾರತವು ತನ್ನ ಇತಿಹಾಸದಲ್ಲಿ ಕಂಡ ವರ್ಣರಂಜಿತ ವ್ಯಕ್ತಿ

(ಎ) ಆರ್ಯ (ಬಿ) ಕೌಟಿಲ್ಯ

(ಸಿ) ಚಂದ್ರಗುಪ್ತ (ಡಿ) ಅಮಾತ್ಯ ರಾಕ್ಷಸ

ಉತ್ತರ : ______

14. 'ನಮ್ಮ ಸೈನಿಕರು' ಪಾಠದ ಆಕರ ಗ್ರಂಥ

(ಎ) ರಕ್ಷಾವಾಹಿನಿ (ಬಿ) ನಮ್ಮ ಸೈನ್ಯ

(ಸಿ) ಭಾರತದ ಪದಕಗಳು (ಡಿ) ಬೇಟೆಗಳು

ಉತ್ತರ : ______

15. ಪಶುಲೋಮನು ಹೇಳಿಕೊಂಡಂತೆ ತಾನು ಆತ್ಮಹತ್ಯೆಗೆ ಯತ್ನಿಸಲು ಕಾರಣ

(ಎ) ಕೊಟ್ಟ ಭಾಷೆಯು ಕೆಟ್ಟಿದ್ದರಿಂದ (ಬಿ) ಮಿತ್ರಾರ್ಥವಾಗಿ

(ಸಿ) ಏನೋ ಪ್ರಮಾದ ಸಂಭವಿಸಿದ್ದರಿಂದ (ಡಿ) ಬಲವಾದ ವಿರೋಧ ಉಂಟಾದುದರಿಂದ

ಉತ್ತರ : ______

16. ಮೊಲವು ಸಿಂಹವನ್ನು ಇಲ್ಲಿ ಕೊಲ್ಲಬಹುದೆಂದು ಯೋಚಿಸಲು ಕಾರಣ

(ಎ) ನೀರು ತುಂಬ ಇರುವುದರಿಂದ (ಬಿ) ಏರಿ ಇಳಿಯಲಾರದ ಬಾವಿಯಲ್ಲಿ ಪ್ರತಿಬಿಂಬ ಕಂಡು

(ಸಿ) ಹಳೆಯ ಕಾಲದ ಬಾವಿಯಾಗಿದ್ದರಿಂದ (ಡಿ) ಆಳವಾದ ಬಾವಿಯಾದುದರಿಂದ

ಉತ್ತರ : ______

17. ಕವಿ ಸೇಡಿಯಾಪು ಕೃಷ್ಣಭಟ್ಟರ ಹುಟ್ಟೂರು

(ಎ) ಪಡ್ನೂರು (ಬಿ) ಕಬಕ

(ಸಿ) ತುಂಬೆ (ಡಿ) ರಾಮಕುಂಜ

ಉತ್ತರ : ______

18. ಭಾರತೀಯ ಭಾಷೆಗಳ ಕಾಂತಿಯಲ್ಲಿ ತನ್ನ ನಿಜರೂಪ ತೋರುವವಳು

(ಎ) ವಿಶ್ವಮಾತೆ (ಬಿ) ಕನ್ನಡಾಂಬೆ

(ಸಿ) ಪ್ರಜಾಮಾತೆ (ಡಿ) ಭಾರತಮಾತೆ

ಉತ್ತರ : ______

19. ನಿರ್ಮಲ ಚಿತ್ತವೇ

(ಎ) ಮಾನವ ಬದುಕು (ಬಿ) ಮಡಿ

(ಸಿ) ದೈವ ಶ್ರದ್ಧೆ (ಡಿ) ಭಕ್ತಿ

ಉತ್ತರ : ______



www.StudyGuideIndia.com

20. 'ಮಂಕುತಿಮ್ಮನ ಕಗ್ಗ' ಇದು ಇವರ ಕೃತಿ :

(ಎ) ಸಿ.ಪಿ.ಕೆ. (ಬಿ) ಕು.ವೆಂ.ಪು.

(ಸಿ) ಡಿ.ವಿ.ಜಿ. (ಡಿ) ತ.ರಾ.ಸು.

ಉತ್ತರ : ______________________

21. ಇದು ಪಕ್ಷಿ ಸಂಕುಲದ ಜೀವಜಾಲವಾಗಿದೆ :

(ಎ) ಗಂಧ-ಕುಸುಮ ಹಿಮಾಚಲ (ಬಿ) ಮಾವು-ಬೇವುಗಳ ಬಲಾಬಲ

(ಸಿ) ರಾಗ-ನಾದಗಳ ಕುಂಕುಮ ಸ್ವರಾಚಲ (ಡಿ) ನಡೆ-ನುಡಿಯ ಸಂಗಮ

ಉತ್ತರ : ______________________

22. ದೊರೆಯಾದವನ ಕರ್ತವ್ಯ

(ಎ) ತನ್ನ ನಂಬಿದವರನ್ನು ಕಾಪಾಡುವುದು (ಬಿ) ಹರಿಯ ಪೂಜೆ ಮಾಡುವುದು

(ಸಿ) ಗುರು-ಹಿರಿಯರ ಅರಿಯುವುದು (ಡಿ) ಪರಹಿತ ಬಯಸುವುದು

ಉತ್ತರ : ______________________

23. ಕನಕದಾಸರ ಕೀರ್ತನೆಗಳ ಅಂಕಿತ

(ಎ) ಚೆನ್ನಮಲ್ಲಿಕಾರ್ಜುನ (ಬಿ) ಕಾಗಿನೆಲೆ ಆದಿಕೇಶವ

(ಸಿ) ಗೋಪಾಲ ವಿಠಲ (ಡಿ) ಶ್ರೀ ಚೆನ್ನಸೋಮೇಶ್ವರಾ

ಉತ್ತರ : ______________________

24. ಜಲನಿಧಿಗೆ ಸರಿಸರಸಿಯು ಯಾವುದು ?

(ಎ) ಸಮುದ್ರ (ಬಿ) ಗಗನ

(ಸಿ) ಸರೋವರ (ಡಿ) ನದಿ

ಉತ್ತರ : ______________________

25. ಗರತಿಗೆ ಆಕೆಯ ತವರು ಮನೆ

(ಎ) ಅರಮನೆ (ಬಿ) ಗಂಡನ ಮನೆ

(ಸಿ) ಕಾಶಿ (ಡಿ) ದೇವಾಲಯ

ಉತ್ತರ : ______________________

26. ಗರತಿಯ ಪ್ರಕಾರ ಲೋಕದಲ್ಲಿ ಬೆಲೆಯುಳ್ಳದ್ದು

(ಎ) ಹಣ (ಬಿ) ಮಣ್ಣು

(ಸಿ) ಭತ್ತ (ಡಿ) ಗೋಧಿ

ಉತ್ತರ : ______________________

www.StudyGuideIndia.com

27. ಮುಕ್ತಾಯಕ್ಕನ ಹೇಳಿಕೆಯಂತೆ ಅನಲವು ಅಡಗಿರುವುದು

(ಎ) ಪತಂಗದಲ್ಲಿ (ಬಿ) ವಾಯುವಿನಲ್ಲಿ

(ಸಿ) ಚಂದ್ರನಲ್ಲಿ (ಡಿ) ಜಲದಲ್ಲಿ

ಉತ್ತರ : __________

28. ಅಕ್ಕಮಹಾದೇವಿಯ ಕಾಲ ಕ್ರಿ.ಶ. ಸುಮಾರು

(ಎ) 1160 (ಬಿ) 0980

(ಸಿ) 1320 (ಡಿ) 1240

ಉತ್ತರ : __________

29. 'ಯಾರು ಅಂಕುಶವಿಟ್ಟರೂ ನನ್ನ ಮನಸ್ಸು ಬನವಾಸಿಯನ್ನು ಸದಾ ನೆನೆಯುವುದು' ಎಂದವರು

(ಎ) ರನ್ನ (ಬಿ) ಪಂಪ

(ಸಿ) ಪೊನ್ನ (ಡಿ) ಜನ್ನ

ಉತ್ತರ : __________

30. ಕಾವೇರಿಯಿಂದ ಗೋದಾವರಿವರೆಗೆ ಹಬ್ಬಿರುವ ನಾಡು

(ಎ) ಕನ್ನಡನಾಡು (ಬಿ) ಮಲೆನಾಡು

(ಸಿ) ತಮಿಳುನಾಡು (ಡಿ) ತುಳುನಾಡು

ಉತ್ತರ : __________

31. 'ತ' ವರ್ಗದ ಅನುನಾಸಿಕಾಕ್ಷರ

(ಎ) ಙ (ಬಿ) ಣ

(ಸಿ) ಮ (ಡಿ) ನ

ಉತ್ತರ : __________

32. ಇವುಗಳಲ್ಲಿ ಅನ್ವರ್ಥ ನಾಮ

(ಎ) ಬಸವ (ಬಿ) ವ್ಯಾಪಾರಿ

(ಸಿ) ಲಿಂಗವ್ವ (ಡಿ) ಮರ

ಉತ್ತರ : __________

33. ಇಂದು ಅವನು ಮನೆಗೆ ಬೇಗನೆ ಬಂದನು. ಈ ವಾಕ್ಯದಲ್ಲಿರುವ ಸರ್ವನಾಮ ಪದ

(ಎ) ಮನೆ (ಬಿ) ಇಂದು

(ಸಿ) ಬಂದನು (ಡಿ) ಅವನು

ಉತ್ತರ : __________

34. ಪರೀಕ್ಷೆಯಲ್ಲಿ ಪ್ರಶ್ನೆ ಸುಲಭವಾಗಿ ಬಂದೀತು. ಈ ವಾಕ್ಯದಲ್ಲಿ 'ಬಂದೀತು' ಎಂಬ ಪದವು ಯಾವ ವಿಧದ ಕ್ರಿಯಾರೂಪ ?

(ಎ) ಸಂಭಾವನಾರ್ಥಕ (ಬಿ) ವಿಧ್ಯರ್ಥಕ

(ಸಿ) ನಿಷೇಧಾರ್ಥಕ (ಡಿ) ಭಾವಾತ್ಮಕ

ಉತ್ತರ : __________



www.StudyGuideIndia.com

35. ಹಳಗನ್ನಡದಲ್ಲಿ ಸಪ್ತಮಿ ವಿಭಕ್ತಿ ಪ್ರತ್ಯಯ

(ಎ) ಅಮ್ (ಬಿ) ಅತ್ತಣಿಂ

(ಸಿ) ಒಳ್ (ಡಿ) ಇಂ

ಉತ್ತರ : ______

36. 'ಒಮ್ಮೊಮ್ಮೆ' ಪದವು ಈ ವ್ಯಾಕರಣಾಂಶಕ್ಕೆ ಉದಾಹರಣೆಯಾಗಿದೆ :

(ಎ) ಆಗಮ ಸಂಧಿ (ಬಿ) ಲೋಪ ಸಂಧಿ

(ಸಿ) ಗುಣ ಸಂಧಿ (ಡಿ) ಜಶ್ತ್ವ ಸಂಧಿ

ಉತ್ತರ : ______

37. ಇವುಗಳಲ್ಲಿ ಯಣ್ ಸಂಧಿಗೆ ಉದಾಹರಣೆ

(ಎ) ಮೃಗೇಂದ್ರ (ಬಿ) ಅತ್ಯಂತ

(ಸಿ) ಇಂದ್ರಾದಿ (ಡಿ) ಸುರಾಸುರ

ಉತ್ತರ : ______

38. 'ಕ್ಷಣ' ಇದರ ತದ್ಭವ ರೂಪ

(ಎ) ಕಣ (ಬಿ) ತಕ್ಷಣ

(ಸಿ) ಚಣ (ಡಿ) ಅಕ್ಷಿ

ಉತ್ತರ : ______

39. ಇದು ಅನ್ಯದೇಶ್ಯ ಪದ :

(ಎ) ಹೊಲ (ಬಿ) ತೋಟ

(ಸಿ) ಮನೆ (ಡಿ) ರೇಡಿಯೋ

ಉತ್ತರ : ______

40. 'ಈಟ್ವಿನ ಗಂಟ' ಈ ಪದದ ಗ್ರಾಂಥಿಕ ರೂಪ

(ಎ) ಇಷ್ಟು ದಿನಗಳ ತನಕ (ಬಿ) ಈ ಗಂಟು

(ಸಿ) ಇಟ್ಟ ಗಂಟು (ಡಿ) ಇಲ್ಲಿಯ ತನಕ

ಉತ್ತರ : ______

41. ಕ್ರಿಯಾ ಸಮಾಸಕ್ಕೆ ಉದಾಹರಣೆ

(ಎ) ಕೆರೆಕಟ್ಟೆಬಾವಿ (ಬಿ) ಕೈಮುಗಿ

(ಸಿ) ಕಂಬನಿ (ಡಿ) ಒಗ್ಗಟ್ಟು

ಉತ್ತರ : ______

42. ಪ್ರಶ್ನೆಗಳನ್ನು ಕೇಳುವ ಸಂದರ್ಭದಲ್ಲಿ ಪದ ಅಥವಾ ವಾಕ್ಯದ ಅಂತ್ಯದಲ್ಲಿ ಬಳಸುವ ಚಿಹ್ನೆ

(ಎ) ಭಾವಸೂಚಕ ಚಿಹ್ನೆ (ಬಿ) ಉದ್ಧರಣ ಚಿಹ್ನೆ

(ಸಿ) ಆವರಣ ಚಿಹ್ನೆ (ಡಿ) ಪ್ರಶ್ನಾರ್ಥಕ ಚಿಹ್ನೆ

ಉತ್ತರ : ______

www.StudyGuideIndia.com

43. 'ಬಾಂಬು ಸಿಡಿಯಿತೆಂಬ ಸುದ್ದಿ ಕೇಳಿ, ಜನರೆಲ್ಲ ಭಯಭೀತರಾದರು' ಈ ವಾಕ್ಯವು ಒಂದು

(ಎ) ಮಿಶ್ರ ವಾಕ್ಯ (ಬಿ) ಸಂಯೋಜಿತ ವಾಕ್ಯ

(ಸಿ) ಸರಳ ವಾಕ್ಯ (ಡಿ) ಸಂಯುಕ್ತ ವಾಕ್ಯ

*ಉತ್ತರ :* ____________________

44. 'ಪೀಯೂಷ' ಈ ಪದದ ಅರ್ಥ

(ಎ) ಪೀತಾಂಬರ (ಬಿ) ಅಮೃತ

(ಸಿ) ಲಿಪಿ (ಡಿ) ಪಾಪ

*ಉತ್ತರ :* ____________________

45. 'ಗುಳುಗುಳು' ಈ ಪದವು ಯಾವ ವ್ಯಾಕರಣಾಂಶಕ್ಕೆ ಉದಾಹರಣೆಯಾಗಿದೆ ?

(ಎ) ದ್ವಿರುಕ್ತಿ (ಬಿ) ಅನುಕರಣಾವ್ಯಯ

(ಸಿ) ಪಡೆನುಡಿ (ಡಿ) ನಾಣ್ಣುಡಿ

*ಉತ್ತರ :* ____________________

46. ಧಾತುವಿಗೆ 'ಕೃತ್' ಪ್ರತ್ಯಯ ಸೇರಿದಾಗ ಆಗುವ ಪದವೇ

(ಎ) ತದ್ಧಿತಾಂತ (ಬಿ) ಸರ್ವನಾಮ

(ಸಿ) ಅಂಕಿತನಾಮ (ಡಿ) ಕೃದಂತ

*ಉತ್ತರ :* ____________________

47. 'ಬಿಳುಪು' ಎಂಬ ಪದವು

(ಎ) ತದ್ಧಿತಾಂತ ನಾಮ (ಬಿ) ಧಾತು

(ಸಿ) ತದ್ಧಿತಾಂತ ಭಾವನಾಮ (ಡಿ) ಅವ್ಯಯ

*ಉತ್ತರ :* ____________________

48. 'ಗುರು' ಮೂರಿರೆ

(ಎ) ಜ ಗಣ (ಬಿ) ಮ ಗಣ

(ಸಿ) ಸ ಗಣ (ಡಿ) ನ ಗಣ

*ಉತ್ತರ :* ____________________

49. ಉಪಮೇಯ ಉಪಮಾನಗಳಲ್ಲಿ ಅಭೇದ ಕಲ್ಪನೆಯೇ

(ಎ) ಶ್ಲೇಷಾಲಂಕಾರ (ಬಿ) ರೂಪಕಾಲಂಕಾರ

(ಸಿ) ಉಪಮಾಲಂಕಾರ (ಡಿ) ದೃಷ್ಟಾಂತಾಲಂಕಾರ

*ಉತ್ತರ :* ____________________

50. 'ಪೆರರ್ಗೆ' ಇದರ ಹೊಸಗನ್ನಡ ರೂಪ

(ಎ) ಹೊರಗೆ (ಬಿ) ಹೆದೆಗೆ

(ಸಿ) ಬೇರೆಯವರಿಗೆ (ಡಿ) ಕೇಳುವವರಿಗೆ

*ಉತ್ತರ :* ____________________

www.StudyGuideIndia.com

## ಬಿ – ವಿಭಾಗ

ಈ ಕೆಳಗಿನ ಪ್ರಶ್ನೆಗಳಿಗೆ ಎರಡೆರಡು ವಾಕ್ಯಗಳಲ್ಲಿ ಉತ್ತರ ಬರೆಯಿರಿ : 10 × 2 = 20

51. ಆಂಗ್ಲ ಭಾಷೆ ವಿಶ್ವವ್ಯಾಪ್ತಿಯಾಗಲು ಕಾರಣವೇನು ?

52. ಅಂಗುಲಿಮಾಲ ತನ್ನ ಮುಂದಿರುವವನು ಬುದ್ಧನೆಂದು ತಿಳಿದಾಗ ಏನೆಂದು ಅರಿಕೆ ಮಾಡಿಕೊಂಡನು ?

53. ಸಿದ್ದೇಗೌಡರಿಗೆ ರಾಚಪ್ಪನು ಕೋಪದಲ್ಲಿ ಏನು ಮಾಡಿದ ?

54. ಪಾಠಶಾಲೆಯ ಗೋಡೆಯ ನೋಟಿಸ್ ಬೋರ್ಡಿನಲ್ಲಿ ಏನೆಂದು ದಪ್ಪಕ್ಷರದಲ್ಲಿ ಬರೆದಿತ್ತು ?

55. ಯುದ್ಧಕ್ಕೆ ಕಾರಣಗಳು ಯಾವುವು ?

56. ಪಶುಲೋಮನು ಇಂದ್ರಾದಿ ದೇವತೆಗಳನ್ನು ಏನೆಂದು ಬೇಡಿಕೊಂಡನು ?

www.StudyGuideIndia.com

57. ಭಾರತಮಾತೆಯ ವರಪುತ್ರ ಕವನದಲ್ಲಿ ಭಾರತೀಯ ಭಾಷೆಗಳ ಬಗ್ಗೆ ಕವಿಯ ಅಭಿಪ್ರಾಯವೇನು ?

58. ಯಾರಲ್ಲಿ ಶೌರ್ಯವನ್ನು ತೋರಿಸು ಎಂದು ಅರ್ಜುನನು ಶಬರನಿಗೆ ಹೇಳಿದನು ?

59. ಮಾನವನು ಸರ್ವಜ್ಞನಾಗುವ ಬಗೆಯನ್ನು ಪುಲಿಗೆರೆ ಸೋಮನಾಥನು ಹೇಗೆ ತಿಳಿಸಿದ್ದಾನೆ ?

60. ಮುಕ್ತಾಯಕ್ಕನು ಯಾವುದನ್ನು ಮಹಾಜ್ಞಾನದಾಚರಣೆ ಎಂದಿದ್ದಾಳೆ ?

ಕೆಳಗಿನ ಹೇಳಿಕೆಗಳನ್ನು ಸಂದರ್ಭ ಸಹಿತ ವಿವರಿಸಿ : $8 \times 2 = 16$

61. ''ನಾನು ಎರಡು ದೋಣಿಗಳ ಮೇಲೆ ಕಾಲಿಟ್ಟಿದ್ದೆ.''

62. 'ನಿಂತೆ ಇರುವೆನು ನಾನು, ನೀನಿನ್ನೂ ನಿಂತಿಲ್ಲ.''

www.StudyGuideIndia.com

63. ''ನಮ್ಮೆಲ್ಲರ ವಿಪತ್ತುಗಳೆಲ್ಲವೂ ಈಗ ತೊಲಗಿದವು.''

64. ''ಶಕ್ತನಾದರೆ ನೆಂಟರೆಲ್ಲ ಹಿತರು, ಅಶಕ್ತನಾದರೆ ಆಪ್ತ ಜನರೇ ವೈರಿಗಳು.''

65. ''ಬೆಲ್ಲ ಬೇವಾಗುವುದವನಿಗೆ.''

66. ''ಬಂಗಾರ ಮೋರೆ ತೊಳೆದೇನ.''

67. ''ಕರಿಕೇಸರಿಯಂ ಕೆಣಕಿದ ಪರಿಯಂ ಪರುಠವಿಸದಿರ್.''

68. ''ಕಾವ್ಯ ಪ್ರಯೋಗ ಪರಿಣತ ಮತಿಗಳ್.''

www.StudyGuideIndia.com

69. ಕೆಳಗಿನವುಗಳಲ್ಲಿ ಯಾವುದಾದರೂ **ಒಂದು** ಗಾದೆಯನ್ನು ವಿಸ್ತರಿಸಿ ಬರೆಯಿರಿ : 1 × 3 = 3

— ಹೆತ್ತ ತಾಯಿ ಹೊತ್ತ ನಾಡು ಸ್ವರ್ಗಕ್ಕಿಂತ ಮಿಗಿಲು.

— ಕಟ್ಟುವುದು ಕಠಿಣ, ಕೆಡಿಸುವುದು ಸುಲಭ.

— ದೂರದ ಬೆಟ್ಟ ಕಣ್ಣಿಗೆ ನುಣ್ಣಗೆ.

www.StudyGuideIndia.com

70. ಕೆಳಗಿನ ವಾಕ್ಯದಲ್ಲಿರುವ ಅಲಂಕಾರವನ್ನು ಹೆಸರಿಸಿ, ಸಮನ್ವಯಗೊಳಿಸಿ : 1 × 3 = 3

ಅಳುವ ಕಂದನ ತುಟಿಯು ಹವಳದ ಕುಡಿಯಂಗ.

71. ಈ ಕೆಳಗಿನ ಪದ್ಯಭಾಗಕ್ಕೆ ಪ್ರಸ್ತಾರ ಹಾಕಿ, ಗಣ ವಿಭಾಗ ಮಾಡಿ, ಛಂದಸ್ಸಿನ ಹೆಸರನ್ನು ಬರೆಯಿರಿ : $1 \times 3 = 3$

ಬಿನ್ನಪವೀ ಮೃಗನಿವಹಂ

ನಿನ್ನಾಜ್ಞೆಯೊಳಿರ್ಕುಮೀ ಮಹಾಟವಿಯೊಳ್ ಶೌ

---

72. ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿ : $1 \times 4 = 4$

ಅಲರೊಳಡಗಿದ ______________________

______________________

______________________

______________________ ವಾಯುವಿನಂತೆ.

ಅಥವಾ

ನಗು ಮನದಿ ______________________

______________________

______________________

______________________ ಮಂಕುತಿಮ್ಮ.

73. ಕೆಳಗಿನ ಪದ್ಯಭಾಗದ ಸಾರಾಂಶವನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ : $1 \times 4 = 4$

ಕೆರೆಯಂ ಕಟ್ಟಿಸು, ಬಾವಿಯಂ ಸವೆಸು, ದೇವಾಗಾರಮಂ ಮಾಡಿ ಸ
ಜ್ಜೆರೆಯೊಳ್ ಸಿಲ್ಕಿದನಾಥರಂ ಬಿಡಿಸು, ಮಿತ್ರರ್ಗಿಂಬುಕೆಯ್ ನಂಬಿದ
ರ್ಗೆರೆವಟ್ಟಾಗಿರು ಶಿಷ್ಯರಂ ಪೊರೆ ಎನುತ್ತಿಂತೆಲ್ಲಮಂ ಮಿಂತೆ ತಾ
ನೆರೆದಳ್ ಪಾಲೆರೆವಂದು ತೊಟ್ಟು ಕಿವಿಯೊಳ್ ಲಕ್ಷ್ಮೀಧರಾಮಾತ್ಯನಾ ॥

www.StudyGuideIndia.com

ಕೆಳಗಿನ ಪ್ರಶ್ನೆಗಳಲ್ಲಿ ಯಾವುದಾದರೂ **ಎರಡು** ಪ್ರಶ್ನೆಗಳಿಗೆ ಆರು ಅಥವಾ ಎಂಟು ವಾಕ್ಯಗಳಲ್ಲಿ ಉತ್ತರ ಬರೆಯಿರಿ : $2 \times 4 = 8$

— ಎಂ.ಎಸ್. ಸುಂಕಾಪುರ ಅವರ ಹೇಳಿಕೆಯಂತೆ ನಗು–ಅಳುಗಳನ್ನು ಸಮನ್ವಯ ದೃಷ್ಟಿಯಿಂದ ಸ್ವೀಕರಿಸುವುದು ಹೇಗೆ?

— ತಿಪ್ಪೇನಹಳ್ಳಿ ಶಾಲೆಗೆ ಪರಂಗಿ ಟೋಪಿ ಸಾಹೇಬರು ಭೇಟಿ ನೀಡಿದ ಪ್ರಸಂಗವನ್ನು ವಿವರಿಸಿ.

— ಮೊಲವು ತನ್ನ ಸರದಿ ಬಂದಾಗ ಏನೆಂದು ಯೋಚಿಸಿತು ?

74.

75.

www.StudyGuideIndia.com

76. ಕೆಳಗಿನ ಪ್ರಶ್ನೆಗೆ ಆರು ಅಥವಾ ಎಂಟು ವಾಕ್ಯಗಳಲ್ಲಿ ಉತ್ತರ ಬರೆಯಿರಿ : $1 \times 4 = 4$

— ಭಾರತ ಮಾತೆಯ ವೈಭವ-ವೈಶಿಷ್ಟ್ಯವನ್ನು 'ಮಾತೃಭೂಮಿ' ಕವನದಲ್ಲಿ ಕವಿ ಅರವಿಂದ ಮಾಲಗಿತ್ತಿ ಹೇಗೆ ವರ್ಣಿಸಿದ್ದಾರೆ ?

ಅಥವಾ

— ದುರ್ಯೋಧನನು ವೈಶಂಪಾಯನ ಸರೋವರದಿಂದ ಹೊರಬಂದ ರೀತಿಯನ್ನು ನಿಮ್ಮ ಮಾತುಗಳಲ್ಲಿ ತಿಳಿಸಿ.

77. — ನಿಮ್ಮ ಶಾಲೆಯಲ್ಲಿ ಈ ವರ್ಷ ಆಚರಿಸಿದ ಕರ್ನಾಟಕ ರಾಜ್ಯೋತ್ಸವದ ಬಗ್ಗೆ ನಿಮ್ಮ ತಂದೆಯವರಿಗೆ ಒಂದು ಪತ್ರ ಬರೆಯಿರಿ. $1 \times 5 = 5$

ಅಥವಾ

— ನಿಮ್ಮ ಊರಿಗೆ ವಿದ್ಯುತ್ ಪೂರೈಕೆಯನ್ನು ಸಮರ್ಪಕವಾಗಿ ಮಾಡುವಂತೆ ಕೋರಿ, ಅಧ್ಯಕ್ಷರು, ಕರ್ನಾಟಕ ವಿದ್ಯುತ್ ನಿಗಮ, ಬೆಂಗಳೂರು ಇವರಿಗೆ ಮನವಿ ಪತ್ರವೊಂದನ್ನು ಬರೆಯಿರಿ.

www.StudyGuideIndia.com

78. ಕೆಳಗಿನ ವಿಷಯಗಳಲ್ಲಿ ಯಾವುದಾದರೂ **ಒಂದಕ್ಕೆ** ಹದಿನೈದು ಸಾಲುಗಳಿಗೆ ಮೀರದಂತೆ ಪ್ರಬಂಧ ಬರೆಯಿರಿ : $1 \times 5 = 5$

— ಅರಣ್ಯ ನಾಶದಿಂದ ಹವಾಮಾನದ ಮೇಲಾಗಿರುವ ದುಷ್ಪರಿಣಾಮ.

— ಸಂಪರ್ಕ ಮಾಧ್ಯಮದಲ್ಲಿ ದೂರದರ್ಶನದ ಪಾತ್ರ.

— ಸ್ವಾತಂತ್ರ್ಯ ದಿನಾಚರಣೆಯ ಮಹತ್ವ.

www.StudyGuideIndia.com